# ಅಕ್ಷರ ಶಕ್ತಿ

'ಅಕ್ಷರ' ಎಂಬ ಪದವನ್ನು 'ಧ್ವನಿ ಸಂಕೇತ' ಅಥವಾ ವರ್ಣ' ಎಂಬರ್ಥದಲ್ಲಿ ಬಳಸುವುದು ವಾಡಿಕೆ. ಆದರೆ 'ಅಕ್ಷರ' ಎಂಬುದರ ಅರ್ಥ ಇನ್ನೂ ವ್ಯಾಪಕವಾಗಿರುವಂಥದು. 'ಕ್ಷರ' ವಲ್ಲದ್ದು ಯಾವುದೋ ಅದು 'ಅಕ್ಷರ.' ಅರ್ಥಾತ್ ಅಕ್ಷರವೆಂದರೆ ನಾಶವಿಲ್ಲದ್ದು, ಶಾಶ್ವತವಾಗಿರುವಂಥದು. ಇಂಗ್ಲಿಷ್‌ನಲ್ಲಿ ವರ್ಣಮಾಲೆಗೆ Alphabet ಎನ್ನುತ್ತಾರಷ್ಟೆ? ಈ ಪದ ಗ್ರೀಕ್ ವರ್ಣಮಾಲೆಯ ಪ್ರಥಮಾಕ್ಷರಗಳಾದ Alpha ಮತ್ತು beta ಎಂಬವುಗಳಿಂದ ಹುಟ್ಟಿಕೊಂಡಿರುವಂಥದು. ಇಂಗ್ಲಿಷಿನ Alphabet ಗಿಂತಲೂ ನಮ್ಮ 'ಅಕ್ಷರ' ಎಂಬ ಪದಕ್ಕಿರುವ ಅರ್ಥ ವ್ಯಾಪ್ತಿ ಹಿರಿದಾದುದು.

ಪ್ರಾಚೀನ ಮನುಷ್ಯ ತನ್ನ ಅನಿಸಿಕೆ ಆಲೋಚನೆಗಳನ್ನು ಇತರರಿಗೆ ತಿಳಿಸಲು ಕೇವಲ ದೈಹಿಕ ಭಾಷೆಯನ್ನೇ ಅವಲಂಬಿಸಿದ್ದ. ಕ್ರಮೇಣ ಆತ ಕೊರಳಿನಿಂದ ಹೊರಡುವ ಧ್ವನಿ ತರಂಗಗಳನ್ನು ನಾಲಿಗೆ, ಹಲ್ಲು, ತುಟಿ ಮುಂತಾದುವುಗಳ ಸಹಾಯದಿಂದ ನಿಯಂತ್ರಿಸಿ, ತನ್ನದೇ ಆದ 'ಭಾಷೆ'ಯನ್ನು ಕಂಡುಕೊಂಡ. ಆದರೆ ಇಂಥ ಅಭಿವ್ಯಕ್ತಿ ಪ್ರಕ್ರಿಯೆಯ ವ್ಯಾಪ್ತಿಯೂ ಪರಿಮಿತವಾದುದು, ಕ್ಷಣಿಕವಾದುದು ಎಂಬ ಅರಕೆ ಆತನನ್ನು ಕಾಡುತ್ತಿದ್ದಿರಬೇಕು. ಅದಕ್ಕೆ ಪರಿಹಾರ ರೂಪದಲ್ಲಿ ಆತ ಕಂಡುಕೊಂಡುದೇ 'ಲಿಪಿ' ಅಥವಾ 'ಅಕ್ಷರ.' ಅದು ಸಂಕೇತಗಳ ಮೂಲಕ ಭಾವನೆ ಆಲೋಚನೆಗಳನ್ನು ದಾಖಲಿಸುವ ಪ್ರಯತ್ನ. ಭಾಷೆಯಲ್ಲಿ ವೈವಿಧ್ಯ ಕಾಣಿಸಿಕೊಂಡಂತೆಲ್ಲಾ ಲಿಪಿಯಲ್ಲೂ ವೈವಿಧ್ಯ ಅನಿವಾರ್ಯವಾಯಿತು. ಜೊತೆಗೆ, ಒಂದೊಂದು ಭಾಷೆಯ ಅಕ್ಷರಗಳೂ ಕಾಲದಿಂದ ಕಾಲಕ್ಕೆ ರೂಪ ವ್ಯತ್ಯಾಸಗೊಳ್ಳುತ್ತಾ, ಯಾವುದೋ ಒಂದು ಕಾಲಘಟ್ಟದಲ್ಲಿ ಸ್ಥಿರ ರೂಪ ಪಡೆಯುವಂತಾಯಿತು. ಒಟ್ಟಿನಲ್ಲಿ ಮಾತೆಂಬುದು ಲಿಪಿಯಲ್ಲಿ ಅವತರಿಸಿದಾಗ ಅದು 'ಅಕ್ಷರ'ವಾಗುತ್ತದೆ; ಅಂದರೆ, ಮಾತಿಗೊಂದು ಶಾಶ್ವತತೆ ಪ್ರಾಪ್ತವಾಗುತ್ತದೆ. ಹಾಗಾದಾಗ ನಮ್ಮ ಭಾವನೆ, ಅನಿಸಿಕೆ ಮುಂತಾದ ಅಮೂರ್ತ ಸಂಗತಿಗಳನ್ನು ಅಕ್ಷರಗಳಲ್ಲಿ ರೂಪಾಂತರಿಸಿ, ದೂರದಲ್ಲಿರುವವರಿಗೂ ತಲುಪಿಸಬಹುದು; ಕಾಲಾಂತರದಲ್ಲಿ ಉಪಯೋಗಿಸಿಕೊಳ್ಳಲೂಬಹುದು. ವ್ಯಕ್ತಿಗತ ಭಾವನೆಗಳು ಭಾಷಾ ಶರೀರವನ್ನು ತಳೆದು ಅಕ್ಷರ ರೂಪದಲ್ಲಿ ಸ್ಥಿರತೆಯನ್ನು ಪಡೆಯಲು ಸಾಧ್ಯವೆಂಬ ಅದ್ಭುತ ಸತ್ಯವನ್ನು ಕಂಡುಕೊಂಡ ಮನುಷ್ಯ ಅಭಿವ್ಯಕ್ತಿ ಪ್ರಕ್ರಿಯೆಯಲ್ಲಿ ಒಂದು ಕ್ರಾಂತಿಯನ್ನೇ ಸಾಧಿಸಿದ. ಅಕ್ಷರಗಳ ಆವಿಷ್ಕಾರದಿಂದಾಗಿ ಒಬ್ಬ ವ್ಯಕ್ತಿಯ ಚಿಂತನೆಗಳು ವಿಸ್ತಾರವಾದ ಸಮುದಾಯಕ್ಕೆ ಪ್ರಸರಿಸಲು ಸಾಧ್ಯವಾಯಿತು. ಗಾಳಿಯಲ್ಲಿ ಕರಗಿ ಹೋಗುತ್ತಿದ್ದ ಭಾವನೆಗಳು ಅಕ್ಷರಗಳಲ್ಲಿ ಉಳಿದುಕೊಳ್ಳುವಂತಾಯಿತು. ಪೀಳಿಗೆಯಿಂದ ಪೀಳಿಗೆಗೆ ಜ್ಞಾನದ ನದಿ ಪ್ರವಹಿಸುವಂತಾಯಿತು. ಹೀಗೆ ಮನುಷ್ಯಲೋಕಕ್ಕೆ ಅಕ್ಷರವೆಂಬುದು ಒಂದು ವರವಾಗಿ, ಪ್ರಗತಿಯ ವೇಗವರ್ಧಕವಾಗಿ, ಜ್ಞಾನ, ಸಂಸ್ಕೃತಿ, ತಿಳಿವಳಿಕೆಗಳ ವಾಹಕವಾಗಿ– ಒಟ್ಟಿನಲ್ಲಿ ಒಂದು ವಿಶಿಷ್ಟ ಶಕ್ತಿಯಾಗಿ ಒದಗಿ ಬಂತು.

ಆದ್ದರಿಂದಲೇ ಭಾರತೀಯ ಮನಸ್ಸು ಅಕ್ಷರಗಳನ್ನು ಪೂಜ್ಯಭಾವದಿಂದ ನೋಡುತ್ತದೆ; ಅಕ್ಷರಗಳಲ್ಲಿ ಆಧ್ಯಾತ್ಮವನ್ನು ಅರಸುತ್ತದೆ. ಅ,ಉ,ಮ– ಎಂಬ ಮೂರು ಧ್ವನಿಗಳ ಸಂಯುಕ್ತ ರೂಪವಾದ 'ಓಂ' ಎಂಬುದು ಭಾರತೀಯರ ಪಾಲಿಗೆ ಪವಿತ್ರವಾದ ಪ್ರಣವಾಕ್ಷರ; ಶಾಶ್ವತವಾದ ಬ್ರಹ್ಮ ವಸ್ತುವನ್ನು ನಿರ್ದೇಶಿಸುವ ಸಂಕೇತಾಕ್ಷರ. ಆದ್ದರಿಂದಲೇ ಮಗುವಿನ ಅಕ್ಷರಾಭ್ಯಾಸವನ್ನು 'ಓಂ' ಎಂಬುದರಿಂದಲೇ ಪ್ರಾರಂಭಿಸುವ ಪರಂಪರೆ ನಮ್ಮಲ್ಲಿದೆ. ಅಕ್ಷರದ ಮೂಲಕ ನಾವು ಗಳಿಸುವ ಜ್ಞಾನವು ಬ್ರಹ್ಮವಸ್ತುವಿನಷ್ಟೇ ಶಾಶ್ವತವಾಗಿರಬೇಕೆಂಬ ಆಶಯವೂ ಇದರ ಹಿನ್ನೆಲೆಯಲ್ಲಿರಬೇಕು. ಅಕ್ಷರ ಕಲಿಕೆಯಿಂದ ವಿದ್ಯೆ, ವಿದ್ಯೆಯಿಂದ ಜ್ಞಾನ, ಜ್ಞಾನದಿಂದ ವಿವೇಕ– ಇವು ವ್ಯಕ್ತಿ ವಿಕಸನದ ಘಟ್ಟಗಳು.

ಅಕ್ಷರದ ಅರಿವು ಮನುಷ್ಯನ ವ್ಯಕ್ತಿತ್ವಕ್ಕೊಂದು ಹೊಳಪು ಕೊಡುತ್ತದೆ. ನಾವು ಅಕ್ಷರಗಳ ನೆರವಿನಿಂದಲೇ ಹೊಸ ಹೊಸ ಭಾವಜಗತ್ತುಗಳಲ್ಲಿ ಪಯಣಿಸುವ ರಹದಾರಿ ಪಡೆಯುತ್ತೇವೆ. ನಮ್ಮ ಆತ್ಮವಿಶ್ವಾಸ, ವ್ಯವಹಾರ ಪ್ರಜ್ಞೆ, ಅಭಿವ್ಯಕ್ತಿ ಸಾಮರ್ಥ್ಯ– ಇತ್ಯಾದಿಗಳೆಲ್ಲವಕ್ಕೂ ಅಕ್ಷರಶಕ್ತಿ ಟಾನಿಕ್ ಇದ್ದಂತೆ. ಕನ್ನಡದ ಪ್ರಾಚೀನ ಕವಿಯೊಬ್ಬ– 'ಮಕ್ಕಳಿಗೆ ತಂದೆ ಬಾಲ್ಯದೊಳಕ್ಕರದ ವಿದ್ಯೆ ಕಲಿಸದಿರ್ದೊಡೆ, ಕೊಂದಂ ಲಕ್ಕಧನವಿರಲು ಕೆಡಗುಂ, ಚಿಕ್ಕಂದಿನ ವಿದ್ಯೆ ಪೊರೆಗು...' ಎಂದು ಸ್ಪಷ್ಟವಾಗಿ ಮಕ್ಕಳ ಪಾಲಕರನ್ನು ಎಚ್ಚರಿಸಿದ್ದಾನೆ. ಸಾಕ್ಷರರ ಸಂಖ್ಯೆ ಹೆಚ್ಚಿದಷ್ಟೂ ದೇಶದ ಮುನ್ನಡೆಯ ವೇಗವೂ ಹೆಚ್ಚುತ್ತದೆ ಎಂಬುದು ಎಲ್ಲ ಚಿಂತಕರೂ ಕಂಡುಕೊಂಡ ಸತ್ಯ. ಶಿಕ್ಷಣ ಪ್ರಸಾರದ ಉದ್ದೇಶಕ್ಕಾಗಿ ಎಲ್ಲ ಸರ್ಕಾರಗಳೂ ಅಧಿಕ ಪ್ರಮಾಣದಲ್ಲಿ ಹಣ ವೆಚ್ಚಮಾಡುತ್ತಿರುವುದು ಈ ಕಾರಣದಿಂದಲೇ. ಎಳೆಯ ಮಕ್ಕಳು ಶಾಲೆಯತ್ತ ಆಕರ್ಷಿತರಾಗಲು ಹಲವಾರು ಯೋಜನೆಗಳು ರೂಪುಗಂಡಿವೆ; ರೂಪುಗೊಳ್ಳುತ್ತಿವೆ. ಆದಾಗ್ಯೂ ದಾರಿದ್ರ್ಯ, ಪಾಲಕರಲ್ಲಿನ ಅಜ್ಞಾನ– ಇತ್ಯಾದಿ ಹಲವು ಕಾರಣಗಳಿಂದಾಗಿ ಅಸಂಖ್ಯಾತ ಮಕ್ಕಳು ಅಕ್ಷರಜ್ಞಾನದಿಂದ ವಂಚಿತರಾಗುತ್ತಲೇ ಇದ್ದಾರೆ. ಅಭಿವೃದ್ಧಿಯ ಕಡೆ ಮುಖ ಮಾಡಿರುವ ಎಲ್ಲ ರಾಷ್ಟ್ರಗಳೂ ಎದುರಿಸಬೇಕಾದ ಮುಖ್ಯ ಸಮಸ್ಯೆಗಳಲ್ಲಿ ಇದೂ ಒಂದು.

■ ವೈನತೇಯ

## ಮಾತೇ ಮುತ್ತು

★ ತನಗೆ ಬೇರೆಯವರು ಶತ್ರುಗಳೂ ಅಲ್ಲ, ಗೆಳೆಯರೂ ಅಲ್ಲ. ತನಗೆ ತಾನೇ ವೈರಿ, ತನಗೆ ತಾನೇ ಗೆಳೆಯ.

-ಭಗವದ್ಗೀತೆ

★ ಕಣ್ಣು, ನಾಲಿಗೆ, ಮನವು ತನ್ನವೆಂದೆನಬೇಡ. ಅವು ತನ್ನ ತಾ ಕೊಂದಾವು.

-ಸರ್ವಜ್ಞ

★ ಹಿಂದೂ ಸಮಾಜ ವ್ಯವಸ್ಥೆ ಹಲವಾರು ಜಾತಿಗಳ ಒಂದು ಏಣಿಯಿದ್ದ ಹಾಗೆ. ಜಾತಿಗಳನ್ನು ಒಂದರ ಮೇಲೊಂದು ಜೋಡಿಸಿಡಲಾಗಿದೆ. ಒಟ್ಟಾಗಿ ಅವು ದ್ವೇಷದ ಆರೋಹಣವನ್ನು, ತಿರಸ್ಕಾರದ ಅವರೋಹಣವನ್ನೂ ಪ್ರದರ್ಶಿಸುತ್ತವೆ.

-ಬಿ.ಆರ್.ಅಂಬೇಡ್ಕರ್

★ ಈ ಸಂಸಾರದಲ್ಲಿ ಒಟ್ಟುಗೂಡಿರುವ ಸಂಬಂಧಿಕರೆನಿಸಿಕೊಳ್ಳುವವರಿಗೆ, ಇರುವ ತನಕ ಒಬ್ಬರ ಮಹತ್ವವು ಒಬ್ಬರಿಗೆ ತೋರುತ್ತಿರುವುದಿಲ್ಲ; ಸತ್ತ ಬಳಿಕ ಮಾತ್ರ ಅತ್ತು ಅತ್ತು ಕಣ್ಣು ಕೆಡಿಸಿಕೊಳ್ಳುತ್ತಾರೆ.

-ಗಳಗನಾಥ

★ ನಮಗೆ ಬೇಕಾದುದಕ್ಕಿಂತ ಹೆಚ್ಚಿನ ಸಂಪತ್ತಿದ್ದರೆ, ಅದನ್ನು ನಾವು ಬದುಕಿರುವಾಗಲೇ ಸಮಾಜದ ಹಿತಕ್ಕಾಗಿ ಉಪಯೋಗಿಸಲೇಬೇಕು.

-ಆಂಡ್ರೂ ಕಾರ್ನೆಗಿ

★ ಲೋಕದಲ್ಲಿ ನಮಗಾಗುವ ನಾನಾ ಸಂಪರ್ಕಗಳಲ್ಲಿ ನಾವು ಉಂಟಾಗಿಸುವ ಔಚಿತ್ಯವೇ ಸಂಸ್ಕೃತಿ.

-ಡಿ.ವಿ.ಜಿ.

★ ಸುಸಂಸ್ಕೃತನಾದ ಪ್ರತಿ ವ್ಯಕ್ತಿಯನ್ನೂ ಒಂದು ಉತ್ತಮ ಸರ್ಕಾರವೇ ಎನ್ನಬಹುದು.

-ಮುಳಿಯ ತಿಮ್ಮಪ್ಪಯ್ಯ

★ ಎಲ್ಲೆಲ್ಲೂ ಇರುವ ದೇವರು ಅವನಾದರೆ, ಸಂಸಾರದಲ್ಲಿಯೂ ಅವನು ಇದ್ದೇ ಇದ್ದಾನೆ. ನಮ್ಮಲ್ಲಿಯೂ ಇರುತ್ತಾನೆ; ನನ್ನ ಹೆಂಡತಿ ಮಕ್ಕಳಲ್ಲಿಯೂ ಅವನೇ ಇರುತ್ತಾನೆ. ನ್ಯಾಯವಾಗಿ ಹಾಗೆ ತಿಳಿದುಕೊಂಡರೆ ಇಲ್ಲಿಂದ ತಪ್ಪಿಸಿಕೊಂಡು ಹೋಗುವ ಮಾತೇ ಬಾರದು.

-ಶಿವರಾಮ ಕಾರಂತ

★ ಮುಗಿಯದ ಅರಮನೆ ಈ ಸಂಸಾರ; ಸದಾ ರಿಪೇರಿಗೆ ತಕ್ಕ ವಿಚಾರ.

-ಕೆ.ಎಸ್.ನರಸಿಂಹಸ್ವಾಮಿ

★ ಮನುಷ್ಯನು ಮನುಷ್ಯನಿಗೆ ದಾಸನಲ್ಲ. ಆದರೆ ಧನಕ್ಕೆ ದಾಸನು.

-ಆಚಾರ್ಯ ಸೋಮದೇವ

★ ಸಂಸಾರ ಸುಖವಾಗಿರಲು ಗಂಡಸರು ಮಾಡಬೇಕಾದದ್ದು ಎರಡೇ ಕೆಲಸ. ಒಂದು, ಎಲ್ಲವೂ ಅವಳ ಇಷ್ಟದಂತೆಯೇ ನಡೆಯುತ್ತದೆ ಎಂದು ಹೆಂಡತಿಗೆ ಮನದಟ್ಟಾಗುವಂತೆ ಮಾಡುವುದು; ಎರಡು, ಅವಳ ಇಷ್ಟದಂತೆಯೇ ನಡೆಯುವುದು.

-ಲಿಂಡನ್ ಬಿ.ಜಾನ್‌ಸನ್

★ ಹಣ ಹಣವನ್ನು ಹುಡುಕಿಕೊಂಡು ಹೋಗುತ್ತದೆ.

-ರಷ್ಯಾ ಗಾದೆ

★ ಬೆಟ್ಟಕ್ಕೆ ಚಳಿಯಾದಡೆ ಏನ ಹೊದಿಸುವರಯ್ಯಾ? ಬಯಲು ಬತ್ತಲೆ ಇದ್ದಡೆ ಏನ ನುಡಿಸುವರಯ್ಯಾ?

-ಅಲ್ಲಮಪ್ರಭು